**(ಇಂದು ದಿನಾಂಕಃ 29-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲು : ವಾದಿ ಪರ ಶ್ರೀ. ಬಿ.ಕೆ.ಜೆ. ವಕೀಲರಿಂದಃ**

ದೊಡ್ಡವ್ವಾ ಹಮ್ಮನಿ ರವರು ವಾದಿಯ ಅಣ್ಣನ ಹೆಂಡತಿ ಎಂದರೆ ನನಗೆ ಗೊತ್ತಿರುವುದಿಲ್ಲಾ. ಈ ದಾವೆಯಲ್ಲಿ ವಾದಿಯ ಪರವಾಗಿ ಯಾರು ಸಾಕ್ಷಿ ಹೇಳಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲಾ. ಅಪ್ಪಣ್ಣಾ ಬಿ ಅಲ್ಲಪ್ಪನವರ ರವರಿಗೆ ಸೇರಿದ ಜಮೀನು ನಮ್ಮ ಜಮೀನಿನ ಸುತ್ತಮುತ್ತ ಇರುವುದಿಲ್ಲಾ ಸದರಿಯವರು ನಮ್ಮ ಓಣಿಯವರಾಗಿರುತ್ತಾರೆ. ಬೈಲಹೊಂಗಲ ಉಪವಿಭಾಗ ನ್ಯಾಯಾಲಯದಲ್ಲಿ ಆರ್.ಟಿ.ಎ./ಎ.ಬಿ ನಂ. 30/2012 ಇತ್ಯರ್ಥಗೊಂಡಿರುತ್ತದೆ ಎಂದರೆ ಸರಿ. ಸದರಿ ಅಪೀಲ ಸಂಃ 30/2012 ರಲ್ಲಿ ಈ ದಾವೆಗೆ ಸಂಬಂಧಿಸಿದಂತೆ ಆದೇಶದಲ್ಲಿ ಸದರಿ ವಾಜ್ಯವನ್ನು ಓ.ಎಸ.ನಂ. 386/2008 ರಲ್ಲಿ ಇತ್ಯರ್ಥಪಡಿಸಿಕೊಳ್ಳಿ ಎಂದು ಒಬ್ಜರವೇಶನ ಮಾಡಲಾಗಿದೆ ಎಂದರೆ ಸಾಕ್ಷಿಯು ಸರಿ ಎನ್ನುತ್ತಾರೆ ಮುಂದುವರೆದು ಮುಂದಿನ ಮೇಲ್ಮನವಿಯಲ್ಲಿ ವಜಾ ಮಾಡಲಾಗಿದೆ ಎಂದು ಹೇಳುತ್ತಾರೆ.

ಡೈರಿ ಸಂಃ 6998 ರ ಮೂಲ ವರದಿಯನ್ನು ನ್ಯಾಯಾಲಯದಲ್ಲಿ ದಾಖಲಿಸಿದ್ದೇನೆ. ಸದರಿಯ ವರದಿಯು ದಿ 12-12-1965 ಕ್ಕೆ ಸಂಬಂಧಿಸಿದೆ. ಸಾಕ್ಷಿಗೆ ತನ್ನ ಪರವಾಗಿ ನಿಶಾನೆಗೊಳಿಸಲಾದ ದಾಖಲೆಗಳನ್ನು ತೋರಿಸಲಾಗಿ ಸದರಿ ದಾಖಲೆಗಳಲ್ಲಿ ವರದಿ ನಕಲು ಇದೆಯೇ ಎಂದು ಕೇಳಿದಾಗ ಸಾಕ್ಷಿಯು ನಿಡಿ-13 ಡೈರಿ ಸಂಃ 6998 ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಡೈರಿ ಸಂಃ 6998 ರ ಪ್ರಕಾರ ಯಾವದೇ ವಾಟ್ನಿ ಆಗಿರುವುದಿಲ್ಲಾ. ನಿಡಿ-13 ರಲ್ಲಿ ಬಸವಲಿಂಗಪ್ಪಾ ಅಂದರೆ ವಾದಿಯ ಅಜ್ಜನಿಗೆ ಬೇರೆ ಯಾವ ಆಸ್ತಿ ಬಂದಿದ್ದ ಬಗ್ಗೆ

ನಮೂದು ಇರುವುದಿಲ್ಲಾ ಎಂದರೆ ಸರಿ. ಮೂಲ ವಾದಿಯ ತಂದೆ ಬಸವಣೆಪ್ಪಾ ರವರಿಗೆ ಯಾವ ಆಸ್ತಿ ಬಂದಿದ್ದೆ ಎಂದು ನಿಡಿ-13 ರಲ್ಲಿ ನಮೂದು ಇರುವುದಿಲ್ಲಾ ಎಂದರೆ ಸರಿ.

ಬಸಪ್ಪ ರವರಿಗೆ ದಾವಾ ಆಸ್ತಿ ಸರ್ವೆ ನಂ 282/3 ನ್ನು ಹೊರತುಪಡಿಸಿ ಬೇರೆ ಯಾವ ಆಸ್ತಿಇತ್ತು ಎನ್ನುವದರ ಬಗ್ಗೆ ಮಾಹಿತಿ ಇರುವುದಿಲ್ಲಾ. ಈರಪ್ಪಾ, ಬಸಲಿಂಗಪ್ಪಾ ಹಾಗೂ ಬಸವಣೆಪ್ಪಾ ರವರಿಗೆ ಯಾವ ಆಸ್ತಿಗಳು ಬಂದಿರುತ್ತವೆ ಎಂದು ಯಾವ ದಾಖಲೆಗಳನ್ನು ಸಲ್ಲಿಸಿರುವುದಿಲ್ಲಾ ಎಂದರೆ ಸರಿ ಸಾಕ್ಷಿ ಮುಂದುವರೆದು ಕೇವಲ ಮನೆ ಒಂದೇ ಬಂದಿರುತ್ತದೆ ಎನ್ನುತ್ತಾರೆ.

ನಿಡಿ-13 ರಲ್ಲಿ ನಮೂದು ಇರುವ ಡೈರಿ ಸಂಃ 6998 ರಂತೆ ಬಸಲಿಂಗಪ್ಪಾ ಹಾಗೂ ಬಸವಣೆಪ್ಪಾ ರವರು ಮೊತ್ತವನ್ನು ಸ್ವೀಕರಿಸಿಕೊಂಡಿದ್ದಾರೆಯೇ ಎಂದರೆ ಸಾಕ್ಷಿಯು ಮಾಹಿತಿ ಇಲ್ಲಾ ಎನ್ನುತ್ತಾರೆ. ದಾವಾ ಆಸ್ತಿ ಸಂಃ 253 ಕ್ಕೆ ಸಂಬಂಧಿಸಿದಂತೆ (ಮನೆ) ಈರಪ್ಪಾ, ಬಸಲಿಂಗಪ್ಪಾ, ಬಸವಣೆಪ್ಪಾ ರವರ ಮಧ್ಯ ವಾಟ್ನಿ ಆಗಿರುವುದಿಲ್ಲಾ ಎಂದರೆ ಸರಿ ಸಾಕ್ಷಿ ಮುಂದುವರೆದು ಅದು ನನ್ನ ಪಾಲಿಗೆ ಬಂದಿರುವ ಆಸ್ತಿ ಎನ್ನುತ್ತಾರೆ. ಸದರಿ ದಾವಾ ಆಸ್ತಿ 253 ನನ್ನ ಪಾಲಿಗೆ ಬಂದಿದೆ ಎಂದು ತೋರಿಸಲು ದಾಖಲೆಯನ್ನು ಸಲ್ಲಿಸಿದ್ದಿರಾ ಎಂದರೆ ಸಾಕ್ಷಿಯು 12-12-1965 ರ ಮನೆ ಹಾಗೂ ಹೊಲ ನನ್ನ ಪಾಲಿಗೆ ಬಂದಿರುತ್ತದೆ ಎನ್ನುತ್ತಾರೆ. ದಾವಾ ಆಸ್ತಿ ಸಂಃ 253 ನನ್ನ ಪಾಲಿಗೆ ಬಂದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲಾ.

ದಾವಾ ಆಸ್ತಿ ಸರ್ವೆ ನಂ. 282/3 ಹಾಗೂ ವಿಪಿಸಿ ಸಂಃ 253 ರಲ್ಲಿ ಬಸಲಿಂಗಪ್ಪಾ ಹಾಗೂ ಬಸವಣೆಪ್ಪಾ ರವರ ಮಧ್ಯ ವಾಟ್ನಿಯಾಗಿದೆ ಎಂದು ತೋರಿಸಲು ಯಾವದೇ ದಾಖಲೆಯನ್ನು ಸಲ್ಲಿಸಿರುವುದಿಲ್ಲಾ ಎಂದರೆ ಸಾಕ್ಷಿಯು ಡೈರಿ ಉತಾರ ಹಾಜರುಪಡಿಸಿದ್ದೇನೆ

ಎನ್ನುತ್ತಾರೆ. ನಿಡಿ-13 ರಂತೆ ಡೈರಿ ಸಂಃ 6998 ಆಗುವ ವೇಳೆಯಲ್ಲಿ ನಾನು ಜನಿಸದ ಕಾರಣದಿಂದ ನನಗೆ ಯಾವದೇ ಮಾಹಿತಿ ಇರುವುದಿಲ್ಲಾ ಎಂದರೆ ಸಾಕ್ಷಿಯು ನಿಡಿ-13 ರ ಪ್ರಕಾರ ಡೈರಿ ಉತಾರನ ಮಾಹಿತಿ ಇದೆ ಎನ್ನುತ್ತಾರೆ.

ನಾನು ಬಿ.ಇ. ಪದವಿಧರ. ನನ್ನ ಮುಖ್ಯ ವಿಚಾರಣೆಯ ನಾಲ್ಕನೇ ಪುಟದ 5 ನೇ ಲೈನಿನಲ್ಲಿ ನನ್ನ ಮುತ್ತಜ್ಜ ಈರಪ್ಪಾ ರವರು 1945 ರಲ್ಲಿ ಮೃತಪಟ್ಟಿದ್ದು ಸದರಿಯವರಿಗೆ ದಾವಾ ಆಸ್ತಿ ಹೊರತುಪಡಿಸಿ ಬೇರೆ ಯಾವ ಆಸ್ತಿಗಳು ಇರುವುದಿಲ್ಲಾ ಎಂದು ಬರೆಯಲಾಗಿದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ 5 ನೇ ಪುಟದ ಮೂರನೇ ಲೈನಿನಲ್ಲಿ ಬಸಲಿಂಗಪ್ಪಾ ಹಾಗೂ ಬಸವಣೆಪ್ಪಾ ರವರು ತನ್ನ ಹಕ್ಕನ್ನು ಬಿಟ್ಟು ಕೊಟ್ಟಿದ್ದಾರೆ ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ಹಕ್ಕು ಬಿಟ್ಟು ಕೊಟ್ಟ ಬಗ್ಗೆ ಯಾವದೇ ನೋಂದಾಯಿತ ದಾಖಲೆ / ಕೋರ್ಟ ಡಿಕ್ರಿ ಇರುವುದಿಲ್ಲಾ ಎಂದರೆ ಸರಿ. ಸದರಿ ಬಸಲಿಂಗಪ್ಪಾ ಹಾಗೂ ಬಸವಣೆಪ್ಪಾ ರವರು ದುಂಡಪ್ಪಾ ರವರಿಗೆ ಯಾವದೇ ಆಸ್ತಿಯನ್ನು ಹಕ್ಕುಬಿಟ್ಟು ಕೊಟ್ಟಿರುವುದಿಲ್ಲಾ ಎಂದರೆ ಸರಿಯಲ್ಲ. ಆದಕಾರಣದಿಂದ 3 ನೇ ಪ್ರತಿವಾದಿ ನಿಮ್ಮ ಮೇಲೆ ಈ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ ಸಾಕ್ಷಿಯು ಮುಂದುವರೆದು ಯಲ್ಲಪ್ಪಾ ರವರು ದಾವೆಯನ್ನು ವಾಪಸ್ಸು ಪಡೆದುಕೊಂಡಿರುತ್ತಾರೆ ಎನ್ನುತ್ತಾರೆ.

ಯಲ್ಲಪ್ಪಾ ರವರು ದಾವೆಯನ್ನು ತಪ್ಪಾಗಿದೆ ಎಂಬ ಕಾರಣಕ್ಕಾಗಿ ವಾಪಸ್ಸು ಪಡೆದಿರುತ್ತಾರೆ . ಸದರಿ ಯಲ್ಲಪ್ಪಾ ರವರ ಸಾಕ್ಷಿಯನ್ನು ಮಾಡಿಸಲು ನಾನು ಸಿದ್ದನಿರುತ್ತೇನೆ. ಯಲ್ಲಪ್ಪರವರಿಗೆ ಹಣವನ್ನು ಪಾವತಿಸಿ ಅಪಸಾತ ಆಗಿರುತ್ತಿರೀ ಎಂದರೆ ಸಾಕ್ಷಿ ನಾನು ದುಡ್ಡು ಕೊಟ್ಟಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯನ್ನು ಯಾವ ಅಡಚಣೆಗೊಸ್ಕರ ದಾವೆ

ಚಾಲ್ತಿಯಲ್ಲಿದ್ದಾಗ ಮಾರಾಟ ಮಾಡಿದ್ದಿರಿ ಎಂದರೆ ಸಾಕ್ಷಿಯು ಮಾರಾಟ ಮಾಡಿದ ಕಾಲಕ್ಕೆ ದಾವೆಯು ಚಾಲ್ತಿಯಲ್ಲಿ ಇರಲಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ತಡೆಯಾಜ್ಞೆ ಇಲ್ಲದಿರುವುದರಿಂದ ಮಾರಾಟ ಮಾಡಿದ್ದೇನೆ ಎನ್ನುತ್ತಾರೆ. ಪುನಃ ಸಾಕ್ಷಿ ಮುಂದುವರೆದು ಸಣ್ಣಪುಟ್ಟ ಅಡಚಣೆಗಳು ಇದ್ದು ಆದಕಾರಣ ಮಾರಾಟ ಮಾಡಲಾಗಿದೆ ಎನ್ನುತ್ತಾರೆ.

ಸಣ್ಣಪುಟ್ಟ ಅಡಚಣೆಗಳು ಇದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲಾ ಸಾಕ್ಷಿ ಮುಂದುವರೆದು ಬ್ಯಾಂಕಿನಲ್ಲಿ ಓ.ಡಿ ಇತ್ತು ಎನ್ನುತ್ತಾರೆ. ಓ.ಡಿ ಇದ್ದ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲಾ. ಸದರಿ ಖರೀದಿ ಪತ್ರದಲ್ಲಿ ಬ್ಯಾಂಕಿನಲ್ಲಿ ಓ.ಡಿ ಇದ್ದ ಬಗ್ಗೆ ಉಲ್ಲೇಖ ಇರುವುದಿಲ್ಲಾ. ನನಗೆ ಆಸ್ತಿ ಮಾರಾಟ ಮಾಡಲು ಅಧಿಕಾರ ಇರಲಿಲ್ಲಾ ನಾನು ಮಾಲೀಕನಾಗಿರಲಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2005-06 ರಿಂದ ನಾನು ಮಾಲೀಕನಿದ್ದೆ ಎನ್ನುತ್ತಾರೆ.

ನನ್ನ ತಂದೆ ಆಸ್ತಿಯನ್ನು ನನ್ನ ಹೆಸರಿಗೆ ಪಂಚಾಯತಿಯಲ್ಲಿ ದಾಖಲಿಸಿರುತ್ತಾರೆ. ಪಂಚಾಯತಿಯಲ್ಲಿ ವರದಿಯನ್ನು ಕೊಟ್ಟು ನನ್ನ ಹೆಸರಿಗೆ ಆಸ್ತಿಯನ್ನು ಮಾಡಿರುತ್ತಾರೆ. ನನ್ನ ತಂದೆಯು ಆಸ್ತಿಯನ್ನು ನನ್ನ ಹೆಸರಿಗೆ ಮಾಡುವ ಪೂರ್ವದಲ್ಲಿ ಬಸಲಿಂಗಪ್ಪಾ ಹಾಗೂ ಬಸವಣೆಪ್ಪಾ ರವರಿಗೆ ಕೇಳಿರುವುದಿಲ್ಲಾ. ನಾನು ಕೂಡಾ ಕೇಳಿರುವುದಿಲ್ಲಾ. ವರದಿಯ ಮುಖಾಂತರ ಆಸ್ತಿಯು ನನ್ನ ಅಜ್ಜ ನಂತರ ನನ್ನ ತಂದೆ ಹಾಗೂ ಈಗ ನನ್ನ ಹೆಸರಿಗೆ ಮಾಡಿಕೊಂಡ ಬಗ್ಗೆ ಬಸಲಿಂಗಪ್ಪಾ ಹಾಗೂ ಬಸವಣೆಪ್ಪಾ ರವರಿಗೆ ಮಾಹಿತಿ ಇರುವುದಿಲ್ಲಾ ಎಂದರೆ ನನಗೆ ಗೊತ್ತಿರುವುದಿಲ್ಲಾ.

ಆಸ್ತಿಗೆ ಸಂಬಂಧಿಸಿದಂತೆ ಕರಪಾವತಿ ರಶೀದಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುವುದಿಲ್ಲಾ. ದಾವಾ ಆಸ್ತಿಗಳು ವಾದಿ ಹಾಗೂ ಪ್ರತಿವಾದಿರವರ ಜಂಟಿ ಆಸ್ತಿ ಎಂದರೆ

ಸರಿಯಲ್ಲ. 6 ನೇ ಪ್ರತಿವಾದಿ ನನ್ನ ಸಂಬಂಧಿಕನಲ್ಲಾ. ನಾನು ಹಾಗೂ 6 ನೇ ಪ್ರತಿವಾದಿ ಕೂಡಿಕೊಂಡು ದಾವಾ ಚಾಲ್ತಿಯಲ್ಲಿದ್ದಾಗ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲಾ ಎಂದರೆ ಸರಿಯಲ್ಲ. ನಾನು ಖೊಟ್ಟಿ ಖರೀದಿ ಪತ್ರ ಸೃಷ್ಟಿಸಿದ್ದರಿಂದ ಸದರಿ ಖರೀದಿ ಪತ್ರವು ವಾದಿಗೆ ಬಂಧನಕಾರಿ ಆಗುವುದಿಲ್ಲಾ ಎಂದರೆ ಸರಿಯಲ್ಲ. ನಾನು ಬೆಳಗಾವಿಯಲ್ಲಿ ವಾಸ ಮಾಡುತ್ತೆನೆ ಎಂದರೆ ಸರಿ ಅದಕ್ಕಿಂತ ಪೂರ್ವದಲ್ಲಿ ಘಟಪ್ರಭಾದಲ್ಲಿ ವಾಸಿಸುತಿದ್ದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಖನಗಾಂವ ನಲ್ಲಿ ಕೂಡ ವಾಸಿಸುತಿದ್ದೆ ಎನ್ನುತ್ತಾರೆ.

ನಾನು ಖನಗಾಂವದಲ್ಲಿ ವಾಸ ಮಾಡುತಿದ್ದೆ ಎಂದು ತೋರಿಸಲು ಯಾವದೇ ದಾಖಲೆ ಸಲ್ಲಿಸಿರುವುದಿಲ್ಲಾ. ನನ್ನ ಹೆಸರಿನಲ್ಲಿ ಘಟಪ್ರಭಾದಲ್ಲಿ ಒಂದು ಮನೆ ಇದೆ. ಚನ್ನಬಸಪ್ಪಾ, ಯಲ್ಲಪ್ಪಾ ಹಾಗೂ ಈರಪ್ಪಾ ರವರ ಹೆಸರಿನಲ್ಲಿ ಬೇರೆ ಬೇರೆ ಕಡೆಗಳಲ್ಲಿ ಆಸ್ತಿಗಳು ಇವೆ ಎಂದರೆ ಸರಿ. ವಾದಿಯ ಹೆಂಡತಿಯ ಊರು ನನಗೆ ಗೊತ್ತಿರುವುದಿಲ್ಲಾ. ಶಿವಲಿಂಗಪ್ಪಾ ರವರ ಹೆಸರಿನಲ್ಲಿ ಆಸ್ತಿಗಳಿವೆ. ವಾದಿಯ ಹೆಸರಿನಲ್ಲಿ ಅಡಿಬಟ್ಟಿ ಊರಿನಲ್ಲಿ ಆಸ್ತಿಗಳು ಇವೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಈ ಮೇಲೆ ಕೇಳಲಾದ ವ್ಯಕ್ತಿಗಳ ಆಸ್ತಿಗಳು ಅವರು ಸ್ವಂತ ತಮ್ಮ ಗಳಿಕೆಯಿಂದ ಗಳಿಸಿದ ಆಸ್ತಿಗಳು ಎಂದರೆ ಸರಿ. ಈ ಮೇಲೆ ಕೇಳಲಾದ ವ್ಯಕ್ತಿಗಳ ಆಸ್ತಿಗಳು ಅವರ ಹೆಂಡತಿಯ ತವರು ಮನೆಯಿಂದ ಬಂದಿರುವಂತಹ ಆಸ್ತಿಗಳಾಗಿರುತ್ತವೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ.

ದಾವಾ ಆಸ್ತಿ ಸರ್ವೆ ನಂ, 282/3 ವಿಸ್ತೀರ್ಣ 4 ಎಕರೆ 08 ಗುಂಟೆ ಜಮೀನು ಅಖಂಡ ಜಮೀನು ಆಗಿರುತ್ತದೆ ಎಂದರೆ ಸರಿ ಸದರಿ 4 ಎಕರೆ 08ಗುಂಟೆ ಜಮೀನಿನಲ್ಲಿ ಪಟ್ಟಿ ಇರುವುದಿಲ್ಲಾ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಕಬ್ಬು ಬೆಳೆಯಲಾಗುತ್ತದೆ ಎಂದರೆ

ಮಾರಾಟ ಮಾಡಿದ ನಂತರ ಏನಾಗಿದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯ ಚಕಬಂದಿ ತಪ್ಪಾಗಿದೆ ಎಂದು ತೋರಿಸಲು ಸರಿಯಾದ ಚಕಬಂದಿ ಇರುವ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲಾ ಎಂದರೆ ಸರಿ. ನನ್ನ ತಂದೆಗೆ ದಾವಾ ಆಸ್ತಿಯ ಬಗ್ಗೆ ಡಿಕ್ರಿ ಪ್ರಕಾರ ಅಥವಾ ನೋಂದಾಯಿತ ದಾಖಲೆಯ ಪ್ರಕಾರ ಯಾವದೇ ಹಕ್ಕು ಪ್ರಾಪ್ತಿಯಾಗಿರುವುದಿಲ್ಲಾ ಎಂದರೆ ಸರಿ.

ಸಾಮಾನ್ಯವಾಗಿ ಒಂದು ಕುಟುಂಬದಲ್ಲಿ ಆಸ್ತಿಗಳ ಬಗ್ಗೆ ಹೊಂದಾಣಿಕ ಮಾಡಬೇಕಾದರೆ ದಾಖಲೆ ಬರೆದಿರುತ್ತಾರೆ ಎಂದರೆ ಸರಿ. ಈರಪ್ಪಾ, ಬಸಲಿಂಗಪ್ಪಾ ಹಾಗೂ ಬಸವಣೆಪ್ಪಾ ರವರಿಗೆ ಆಸ್ತಿಗಳಲ್ಲಿ ಅರೆಂಜಮೆಂಟ್ ಮಾಡಿದ್ದಾರೆ ಎಂದು ತೋರಿಸಲು ದಾಖಲೆ ಇರುವುದಿಲ್ಲಾ ಎಂದರೆ ಸಾಕ್ಷಿ ಗೊತ್ತಿಲ್ಲಾ ಎನ್ನುತ್ತಾರೆ.

ವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೆ ಕೆ ಸರಿ ಇದೆ**

**Sd/-**

**(Abhinay)**

**Addl. CJ & JMFC, Gokak**